ಓ ಎಸ್ ನಂ. 72/2014
ಪಿ.ಡಬ್ಲ್ಯೂ ಃ 1

ದಿನಾಂಕಃ-22.06.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಾದ ಶ್ರೀ. ಎಂ ಎ ರವರಿಂದ**

ದಾವಾ ಸ್ವತ್ತುಗಳು ಚನ್ನಬಸಪ್ಪನವರಿಗೆ ಸೇರಿದ ಸ್ವತ್ತುಗಳು ಅಲ್ಲ ಎಂದರೆ ಸರಿಯಲ್ಲ, ಚನ್ನಬಸಪ್ಪನವರ ಹೆಸರಿಗಿದ್ದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ದಾವಾ ಐಟಂ ನಂ. 2 ರಿಂದ 5, 8 ರಿಂದ 11 ಈ ಸ್ವತ್ತುಗಳು ಚಿಕ್ಕಬಸವಯ್ಯನವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಅವರು ಕೊಂಡುಕೊಂಡಂತಹ ಸ್ವತ್ತುಗಳು ಎಂದರೆ ಸರಿಯಲ್ಲ, ಚಿಕ್ಕಬಸವಯ್ಯ ದಾವಾ ಐಟಂ ನಂ. 2 ರಿಂದ 5, 8 ರಿಂದ 11ನ್ನು ಖರೀದಿಸಿರುವ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ, ಚಿಕ್ಕಬಸವಯ್ಯನವರು ತಾವು ಜೀವಂತವಿರುವಾಗ ದಾವಾ ಐಟಂ ನಂ. 2 ರಿಂದ 5, 8 ರಿಂದ 11ರ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ, ಸದರಿ ಚಿಕ್ಕಬಸಪ್ಪನವರು ತಮ್ಮ ಜೀವಿತಾವಧಿಯಲ್ಲಿ ತಾವು ಖರೀದಿಸಿದ ದಾವಾ ಐಟಂ ನಂ. 2 ರಿಂದ 5, 8 ರಿಂದ 11 ಇವುಗಳನ್ನು ಪ್ರತಿವಾದಿಗೆ ವಿಲ್ ಮುಖಾಂತರ ಬಿಟ್ಟುಕೊಟ್ಟಿರುತ್ತಾರೆಂದರೆ ಸರಿಯಲ್ಲ, ಚಿಕ್ಕಬಸಪ್ಪನವರ ಜೀವಿತಾವಧಿಯಲ್ಲಿ ದಾವಾ ಐಟಂ ನಂ. 2 ರಿಂದ 5, 8 ರಿಂದ 11ರ ಜಮೀನುಗಳಲ್ಲಿ ಅವರೊಂದಿಗೆ ಪ್ರತಿವಾದಿಯೂ ಸಹ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ, ಪ್ರತಿವಾದಿಯನ್ನು ಮದುವೆ ಮಾಡಿ ಚಿಕ್ಕಬಸಪ್ಪನವರು ತಮ್ಮ ಬಳಿಯೆ ಇಟ್ಟುಕೊಂಡಿದ್ದು ಎಂದರೆ ಸರಿ. ನಮ್ಮ ತಾಯಿಗೆ ಮದುವೆ ಮಾಡಿ ಗಂಡನ ಮನೆಗೆ

ಕಳುಹಿಸಿದ್ದರು ಎಂದರೆ ಸರಿ. ಪ್ರತಿವಾದಿ ಚಿಕ್ಕಬಸಪ್ಪನವರನ್ನು ಅವರ ಕೊನೆಯ ಅವಧಿಯಲ್ಲಿ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ, ಚಿಕ್ಕಬಸವಪ್ಪನವರ ಮರಣದ ನಂತರ ಅವರ ಅಂತ್ಯಕ್ರಿಯೆಯನ್ನು ಪ್ರತಿವಾದಿಯೇ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಿಕ್ಕಬಸಪ್ಪನವರು ತಮ್ಮ ಜೀವಿತಾವಧಿಯಲ್ಲಿ ಏನು ಕೆಲಸ ಮಾಡುತ್ತಿದ್ದರು ಎಂಬುದು ನನಗೆ ಗೊತ್ತಿಲ್ಲ,, ಸಾಕ್ಷಿ ಮುಂದುವರಿದು ವ್ಯವಸಾಯ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಚಿಕ್ಕಬಸಪ್ಪನವರು ವ್ಯವಸಾಯದ ಜೊತೆಗೆ ವ್ಯಾಪಾರವನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಈ ರೀತಿ ತಾವು ಗಳಿಸಿದ ಆದಾಯದಿಂದ ದಾವಾ ಐಟಂ ನಂ. 2 ರಿಂದ 5, 8 ರಿಂದ 11ನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ ನಂ. 2 ರಿಂದ 5, 8 ರಿಂದ 11ಕ್ಕೆ ಸಂಬಂಧಿಸಿದಂತೆ ಖಾತೆ-ಪಹಣಿಗಳು ಚಿಕ್ಕಬಸಪ್ಪನವರ ಹೆಸರಿನಲ್ಲಿ ಬರುತ್ತಿದ್ದವು ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ. 2 ರಿಂದ 5, 8 ರಿಂದ 11ಕ್ಕೆ ಸಂಬಂಧಿಸಿದಂತೆ ತೆರಿಗೆಯನ್ನು ಸಹ ಚಿಕ್ಕಬಸಪ್ಪನವರೇ ಕಟ್ಟುತ್ತಿದ್ದರು ಎಂದರೆ ಸರಿ. ಚಿಕ್ಕಬಸಪ್ಪನವರ ಬರೆದುಕೊಟ್ಟ ವಿಲ್‌ನ ಆಧಾರದ ಮೇಲೆ ದಾವಾ ಐಟಂ ನಂ. 2 ರಿಂದ 5, 8 ರಿಂದ 11ರ ಜಮೀನುಗಳಿಗೆ ಸಂಬಂಧಿಸಿದಂತೆ ಖಾತೆ-ಪಹಣಿಗಳು ಪ್ರತಿವಾದಿಯ ಹೆಸರಿಗೆ ಬರುತ್ತಿವೆ ಎಂದರೆ ಸುಳ್ಳು. ಪ್ರತಿವಾದಿಯೇ ದಾವಾ ಐಟಂ ನಂ. 2 ರಿಂದ 5, 8 ರಿಂದ 11ರ ತೆರಿಗೆ ಕಟ್ಟಿಕೊಂಡು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ಸುಮಾರು 50 ವರ್ಷಗಳಿಂದಲೂ ನಾನು ಹಾಗೂ ನನ್ನ ತಾಯಿ ನಮ್ಮ ತಂದೆಯ ಮನೆಯಲ್ಲಿಯೇ ವಾಸ ಇದ್ದೇವೆ ಎಂದರೆ ಸರಿ. ದಾವಾ ಆಸ್ತಿ ಐಟಂ ನಂ. 6ನ್ನು ದಿನಾಂಕಃ-17.01.1994 ಹಾಗೂ ದಾವಾ ಆಸ್ತಿ ಐಟಂ ನಂ. 7ನ್ನು ದಿನಾಂಕಃ-

29.09.2009 ರಂದು ಪ್ರತಿವಾದಿ ಖರೀದಿಸಿದ ಸ್ವತ್ತುಗಳು ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಂ ನಂ. 1, 6 ಮತ್ತು 7 ಜಮೀನಿಗೆ ಸಂಬಂಧಿಸಿದಂತೆ ಖಾತೆ-ಪಹಣಿಗಳು ಪ್ರತಿವಾದಿಯ ಹಸೆರಿನಲ್ಲಿವೆ ಹಾಗೂ ಅವರೇ ದಾವಾ ಆಸ್ತಿ ಐಟಂ ನಂ. 1, 6 ಮತ್ತು 7ರ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಂ ನಂ. 1 ರಿಂದ 11 ಪ್ರತಿವಾದಿಯ ಸ್ವಾಧೀನಾನುಭವದಲ್ಲಿ ಇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಹಾಗೂ ಒಟ್ಟು ಕುಂಟುಂಬದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪ್ರತಿವಾದಿಯ ಸ್ವತ್ತುಗಳಾಗಿರುವುದರಿಂದ ದಾವಾ ಸ್ವತ್ತುಗಳಲ್ಲಿ ನಮಗೆ ಭಾಗ ಕೇಳಲು ನಮಗೆ ಅಧಿಕಾರವಾಗಲೀ, ಹಕ್ಕಾಗಲೀ ಇಲ್ಲ ಎಂದರೆ ಸರಿಯಲ್ಲ. ನಮಗೆ ದಾವಾ ಸ್ವತ್ತುಗಳ ಮೇಲೆ ಯಾವುದೇ ಅಧಿಕಾರ, ಹಕ್ಕು ಇಲ್ಲದಿದ್ದರೂ ನಾವು ಪ್ರತಿವಾದಿಯ ವಿರುದ್ಧ ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ.

ನಮ್ಮ ತಾಯಿ ಅನಾರೋಗ್ಯದಿಂದ ಬಳಲುತ್ತಿದ್ದಾರೆಂದು ತೋರಿಸಲು ನಾನು ದಾಖಲೆಯನ್ನು ಹಾಜರುಪಡಿಸಿಲ್ಲ. ನಿಪಿ.4 ರಿಂದ 23ರ ದಾಖಲೆಗಳು ಕರಿಬಸಪ್ಪ ಮತ್ತು ಪ್ರತಿವಾದಿಯ ಹೆಸರಿನಲ್ಲಿರುವ ಪಹಣಿ ಪತ್ರಿಕೆಗಳು ಎಂದರೆ ಸರಿ. ದಾವಾ ಸ್ವತ್ತುಗಳು ನಮ್ಮ ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಆಸ್ತಿಗಳು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ. ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಬ್ಬಿ